Abolition of carry-over system in P. U. C. Examination.

ಶ್ರೀ ಕೆ. ರಾಮಭಟ್.— ಸ್ವಾಮಿ, ಪಿ.ಯು.ಸಿ. ನಲ್ಲಿ ಈ ಮೊದಲು ಇದ್ದ ಕ್ಯಾರಿಓವರ್ ಪದ್ಧತಿ ವಿಚಾರದಲ್ಲಿ ನಾನು ಒಂದು ನೋಟೀಸ್ ಕೊಟ್ಟಿದ್ದೆ. ಕಳೆದ ೩ ದಿವಸಗಳಿಂದಲೂ ತಾವು ನನಗೆ ಸಮಾಧಾನ ಹೇಳುತ್ತಿದ್ದೀರಿ, ಆದರೆ ಮಾನ್ಯ ಮಂತ್ರಿಗಳು ಇನ್ನೂ ಸ್ಟೇಟ್‌ಮೆಂಟ್ ಮಾಡಲಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ವಿಷಯದಲ್ಲಿ ಇವೊತ್ತೇ ಮಾನ್ಯ ವಿದ್ಯಾ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಲು ತಾವು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.— ನಾನು ವಿದ್ಯಾಮಂತ್ರಿಗಳಿಗೆ ಹೇಳಿಕಳಿಸಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ನೆರೆಯ ಹಾವಳಿ ವಿಚಾರದಲ್ಲಿ ನಾನು ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಅದು ಪ್ರೂಟ್‌ಫುಲ್ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಯವರು ಅವರ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಈ ವಿಚಾರವಾಗಿ ಸಂಪೂರ್ಣವಾದ ಮಾಹಿತಿಯನ್ನು ತೆಗೆದುಕೊಳ್ಳಲಿ. ನಾಳೆ ಅನ್‌ಆಫಿಷಿಯಲ್ ಬ್ಯುಸಿನೆಸ್ ಇದೆ. ಇದನ್ನು ಈ ಸಭೆಯ ಒಪ್ಪಿಗೆ ಪ್ರಕಾರ ನಾಳೆ ಬೇಕಾದರೆ ತೆಗೆದುಕೊಳ್ಳಿ. ಆದರೆ ಇದರ ಬಗ್ಗೆ ಮಾತನಾಡುವುದಕ್ಕೆ ನಮಗೆ ನಾಳೆ ೨ ಗಂಟೆಗಳ ಕಾಲ ಅವಕಾಶ ಬೇಕಾಗುತ್ತದೆ. ಇದನ್ನು ನಾಳೆ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಸದಸ್ಯರೆಲ್ಲರ ಒಪ್ಪಿಗೆ ಇದ್ದರೆ ನಾಳೆಯೇ ಇದನ್ನು ತೆಗೆದುಕೊಳ್ಳಿ, ನನ್ನ ಅಭ್ಯಂತರವೇನೂ ಇಲ್ಲ.

MR. SPEAKER.— The Hon'ble minister has also agreed. So immediately after question Hour, that will be taken for discussion, for one or two hours as the case may be.

Misappropriation of funds under Employment Affarmation Scheme in Anekal Taluk.

ಶ್ರೀ ಎಸ್. ಆರ್. ಬೊಮ್ಮಾಯಿ.— ಸ್ವಾಮಿ, ಇನ್ನೊಂದು ವಿಚಾರವೇನೆಂದರೆ ರೂಲ್ ೧೭೮ರ ಕೆಳಗೆ ನಾನು ಒಂದು ಪ್ರಿವಿಲೇಜ್ ಮೋಷನ್ ನೋಟೀಸ್ ಕೊಟ್ಟಿದ್ದೇನೆ. ಈ ಪ್ರಿವಿಲೇಜ್ ಮೋಷನ್ ವಿಚಾರ ಇಷ್ಟೆ, ಈ ಆನೇಕಲ್ ತಾಲ್ಲೂಕಿನಲ್ಲಿ ಈ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂ ವಿಚಾರದಲ್ಲಿ ಹಣ ದುರುಪಯೋಗ ಸಡೆದಿದೆ.

ಅಧ್ಯಕ್ಷರು.— ತಾವು ಈ ವಿಚಾರದಲ್ಲಿ ಒಂದು ನೋಟೀಸನ್ನು ಕಳಿಸಿದ್ದೀರಿ. ನಾನು ಅದನ್ನು ಇನ್ನೂ ನೋಡಿಲ್ಲ. ಅದನ್ನು ನೋಡಿ, I have to send a copy to concerned Hon'ble Minister. So, It will be taken up tomarrow or day-after tomarrow. ಏಕೆಂದರೆ ಅವರಿಂದ ಮಾಹಿತಿಯನ್ನು ತರಿಸಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ಸ್ವಾಮಿ, ಇದರಲ್ಲಿರತಕ್ಕಂಥ ತೊಂದರೆ ಏನೆಂದರೆ ಈ ಎಂಪ್ಲಾಯ್‌ಮೆಂಟ್ ಆಫರ್‌ಮೇಷನ್ ಸ್ಕೀಂ ಬಗ್ಗೆ ಮಿಸ್ ಅಪ್ರೋಪ್ರಿಯೇಷನ್ ಮಿಸ್ ಅಪ್ಲಿಕೇಷನ್ ಆಗಿದೆ; ನಾನು ಮತ್ತು ಮಾನ್ಯ ಚಂದ್ರಶೇಖರ್‌ರವರು ರೂಲ್ ೩೧೨ರ ಕೆಳಗೆ ನೋಟೀಸ್ ಕೊಟ್ಟಿದ್ದೇವೆ. ಅಲ್ಲಿ ಆಗಿರತಕ್ಕಂಥ ಹಣ ದುರುಪಯೋಗದ ವಿಚಾರದಲ್ಲಿ ಡಿವಿಜನಲ್ ಕಮೀಷನರ್‌ರವರು ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದಾರೆ. ಈ ಬಗ್ಗೆ ಸಿ.ಓ.ಡಿ. ಯವರ ರಿಪೋರ್ಟ್ ಸಹ ಬಂದಿದೆ. ನನಗೆ ತಿಳಿದಮಟ್ಟಿಗೆ ಇದರಲ್ಲಿ ೧೩ ಲಕ್ಷ ರೂಪಾಯಿಗಳಷ್ಟು ಮಿಸ್‌ಯೂಸ್ ಆಗಿದೆ. ಇದನ್ನು ನಾಳೆ ತೆಗೆದುಕೊಳ್ಳುವುದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಈ ವಿಷಯವನ್ನು ಈ ಸಭೆಯಲ್ಲಿ ನಿನ್ನೆ ಮಾನ್ಯ ದೇವೇಗೌಡರು ಮತ್ತು ಮಾನ್ಯ ಚಂದ್ರಶೇಖರ್‌ರವರು ಎತ್ತಿದಾಗ ಮಾನ್ಯ ವ್ಯ. ರಾಮಕೃಷ್ಣರವರು, these allegations are baseless ಎಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ಹಾಗೂ ಮಹತ್ವವಾದ ವಿಚಾರ. ಇದು ಈ ಮನೆಯ ಮಾನ್ಯ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದೆ, ಮತ್ತೆ ಇದು ಸರ್ಕಾರದವರ ಗೌರವದ ಪ್ರಶ್ನೆ ಹಾಗೂ ಕರ್ತವ್ಯದ ಪ್ರಶ್ನೆಯಾಗಿದೆ. ನಾವು ಒಂದು ವಿಚಾರದಲ್ಲಿ ಪ್ರಶ್ನೆ ಕೇಳಿದಾಗ